# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.2325/2014
ಸಿಡಬ್ಲ್ಯೂ 1 ಪಿಡಬ್ಲ್ಯೂ 1

| | | |
|---|---|---|
| ಸಾಕ್ಷಿಯ ಹೆಸರು | - | ಸುಜಾತ ಹಣಮಂತ ಮರೆಪ್ಪಗೋಳ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಮನೆಗೆಲಸ |
| ವಾಸ | - | ಖನಗಾಂವ, ಹಾಲಿ ವಸ್ತಿ ಕಣದಾಳ |

<u>ದಿನಾಂಕಃ **13-02-2020** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

1 ನೇ ಆರೋಪಿ ನನ್ನ ಗಂಡ. 2 ಮತ್ತು 3 ನೇ ಆರೋಪಿತರು ನನ್ನ ಅತ್ತೆ ಮಾವ. ಸುಮಾರು 13 ವರ್ಷಗಳ ಹಿಂದೆ ಖನಗಾಂವ ಗ್ರಾಮದ ಗಂಡನ ಮನೆಯ ಮುಂದೆ ನಮ್ಮ ಮದುವೆ ಹಿರಿಯರ ಸಮಕ್ಷಮ ಆಗಿದೆ. ಮದುವೆ ಸಮಯದಲ್ಲಿ ಚಾಸಾ-6 ಮತ್ತು 7 ರವರು ನನ್ನ ಗಂಡನ ಪರವಾಗಿ ಹಿರಿಯರಿದ್ದರು. ನನ್ನ ಪರವಾಗಿ ಚಾಸಾ-8 ಮತ್ತು 9 ರವರು ಹಿರಿಯರಿದ್ದರು. ಮದುವೆ ಆದ ನಂತರ ಸುಮಾರು 10 ವರ್ಷ ಗಂಡನ ಮನೆಯಲ್ಲಿ ಇದ್ದೆನು. ಮದುವೆ ಆದ ನಂತರ 1 ವರ್ಷ ಮಾತ್ರ ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ ನಂತರ ಮಕ್ಕಳಾಗಿಲ್ಲ ಅಂತಾ ಹೇಳಿ ಹೊಡೆ ಬಡೆ ಮಾಡುತ್ತಿದ್ದರು. ಬಂಗಾರ ಮತ್ತು ವರದಕ್ಷಿಣೆ ತೆಗೆದುಕೊಂಡು ಬಂದಿಲ್ಲ ಅಂತಾ ಹೊಡೆ ಬಡೆ ಮಾಡುತ್ತಿದ್ದರು. ಸದರಿ ವಿಷಯವನ್ನು ಚಾಸಾ-4 ರಿಂದ 9 ರವರಿಗೆ ಹೇಳಿದ್ದೆನು. ಅವರು ಬಂದು ಆರೋಪಿತರಿಗೆ ಬುದ್ದಿವಾದ ಹೇಳಿದ್ದರು. ಆದರೆ ಆರೋಪಿತರು ಸರಿ ಹೋಗಲಿಲ್ಲ.

ಸುಮಾರು 4-5 ವರ್ಷಗಳ ಹಿಂದೆ 1 ನೇ ತಾರೀಖಿನಂದು ಸಾಯಂಕಾಲ 07.00 ಗಂಟೆ ಸುಮಾರಿಗೆ 1 ರಿಂದ 3 ನೇ ಆರೋಪಿತರು ಸೇರಿ ನಿನಗೆ ಮಕ್ಕಳಾಗಿರುವುದಿಲ್ಲ, ನಾವು 1 ನೇ ಆರೋಪಿತನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಅಂತಾ ಹೊಡೆ ಬಡೆ ಮಾಡಿ ಹೊರಗಟ್ಟಿದರು. ನಾನು ನನ್ನ ತವರು ಮನೆಗೆ ಹೋದೆನು. ಸದರಿ ವಿಷಯವನ್ನು ನಾನು ನನ್ನ ತಂದೆ ತಾಯಿ ಮತ್ತು ಊರ ಹಿರಿಯರಿಗೆ ತಿಳಿಸಿದೆನು. 4-5 ದಿನ ದಾರಿ ಕಾಯ್ದೆನು. ಆರೋಪಿತರು ಬರಲಿಲ್ಲ. ನಂತರ ನಾನು ಗೋಕಾಕ ಪೊಲೀಸ ಠಾಣೆಗೆ ಬಂದು ಮಾಹಿತಿ ನೀಡಿದ್ದೇನೆ. ನನ್ನನ್ನು ಹೊಡೆ ಬಡೆ ಮಾಡಿ ಮನೆಯಿಂದ ಹೊರಗೆ ಹಾಕಿದ 5 ದಿನಗಳ ನಂತರ ಪಿರ್ಯಾದಿ ನೀಡಿರುತ್ತೇನೆ. ಆರೋಪಿತರು ಕರೆಯಲು ಬರುತ್ತಾರೆ ಎಂದು ದಾರಿ ನೋಡಿದ ಕಾರಣ ಹಾಗೂ ಹಿರಿಯರನ್ನು ವಿಚಾರಣೆ ಮಾಡಿದ ಕಾರಣ ತಡವಾಗಿ ಪಿರ್ಯಾದಿ ನೀಡಿದ್ದೇನೆ. ನಾನು ನೀಡಿದ ಮಾಹಿತಿಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ನಿಪಿ-1 ನ್ನು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು, ನಾನು ಘಟನಾ ಸ್ಥಳವನ್ನು ತೋರಿಸಿದ್ದೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 3 ನೇ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೆ. 1 ನೇ ಆರೋಪಿತನು ಗೈರು ಹಾಜರಿದ್ದು ಅವರ ಪರ ವಕೀಲರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎನ್ನುವ ಶರತ್ತಿನೊಂದಿಗೆ ಅರ್ಜಿಯನ್ನು ಪುರಸ್ಕರಿಸಲಾಯಿತು. 1 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲುಃ ಶ್ರೀ ಬಿ ಕೆ ಜೆ  ಆರೋಪಿತರ ಪರ ವಕೀಲರಿಂದಃ

ಮದುವೆ ಆದ ನಂತರ 1 ನೇ ಆರೋಪಿತನು ಎಷ್ಟು ವರ್ಷ ಮಿಲಿಟರಿಯಲ್ಲಿ ಇದ್ದ ಎನ್ನುವ ಬಗ್ಗೆ ನನಗೆ ನೆನಪಿಲ್ಲ. ಆತ ಎಲ್ಲೆಲ್ಲಿ ಕೆಲಸ ಮಾಡಿದ್ದಾನೆ ಅಂತಾ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದ್ದಾನೆ ಎಂದರೆ ಸರಿಯಲ್ಲ. ನನ್ನ ಗಂಡನ ಮನೆಯ ಅಕ್ಕ ಪಕ್ಕದಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. 1 ನೇ ಆರೋಪಿ ನನ್ನ ಹೆಸರಿನಲ್ಲಿ ಒಂದು ಉಳಿತಾಯ ಖಾತೆ ತೆರೆದಿದ್ದ ಎಂದರೆ ಸರಿ. ಎ.ಟಿ.ಎಂ.ಕಾರ್ಡ ಮಾಡಿಸಿ ಕೊಟ್ಟಿದ್ದ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಖಾತೆಗೆ ಹಣ ಹಾಕುತ್ತಿದ್ದ ಎಂದರೆ ಸರಿಯಲ್ಲ. 1 ನೇ ಆರೋಪಿ ಕರ್ತವ್ಯದ ಮೇಲೆ ಇದ್ದಾಗ ನಾನು, 2 ಮತ್ತು 3 ನೇ ಆರೋಪಿತರು ಮನೆಯಲ್ಲಿ ಇರುತ್ತಿದ್ದೆವು ಎಂದರೆ ಸರಿ. 2 ನೇ ಆರೋಪಿನಿಗೆ ಸುಮಾರು 70 ವರ್ಷ ಆಗಿವೆ ಎಂದರೆ ಸರಿ. 3 ನೇ ಆರೋಪಿತಳಿಗೆ ಸುಮಾರು 65 ಆಗಿವೆ ಎಂದರೆ ಸರಿ. ನಿಪಿ-1 ನ್ನು ನೀಡುವುದಕ್ಕಿಂತ ಮುಂಚೆ ನಾನು ಯಾವುದೇ ಪಿರ್ಯಾದಿ ಕೊಟ್ಟಿಲ್ಲ ಎಂದರೆ ಸರಿ. 1 ನೇ ಆರೋಪಿ ವರ್ಷಕ್ಕೆ 2 ತಿಂಗಳು ರಜೆ ಮೇಲೆ ಬರುತ್ತಿದ್ದರು ಎಂದರೆ ಸಾಕ್ಷಿಯು " ಆತನಿಗೆ ಬೇರೆ ಕಡೆ ಸಂಬಂಧ ಇತ್ತು, ಆ ಕಾರಣ ನನ್ನ ಹತ್ತಿರ ಬರುತ್ತಿರಲಿಲ್ಲ " ಎಂದು ಹೇಳುತ್ತಾರೆ. 1 ನೇ ಆರೋಪಿ ಬೇರೆ ಸಂಬಂಧ ಹೊಂದಿದ ಬಗ್ಗೆ ನಿಪಿ-1 ರಲ್ಲಿ ಬರೆಸಿದ್ದೇನೆ. ಆರೋಪಿತರು ಹೊಡೆ ಬಡೆ ಮಾಡಿದ ಸಮಯದಲ್ಲಿ ನಾನು ಆಸ್ಪತ್ರೆಗೆ ತೋರಿಸಿಲ್ಲ. ಆರೋಪಿತರಿಗೆ ಖನಗಾಂವ ಗ್ರಾಮದಲ್ಲಿ ಬೇರೆ ಯಾರು ಸಂಬಂಧಿಕರು ಇಲ್ಲ. ಆರೋಪಿತರು ತೊಂದರೆ ಕೊಡುತ್ತಿದ್ದ ಬಗ್ಗೆ ಅಕ್ಕ ಪಕ್ಕದ ಮನೆಯವರಿಗೆ ಮತ್ತು ಹಿರಿಯರಿಗೆ ತಿಳಿಸಿದ್ದೇನೆ. ನಿಪಿ-1 ನ್ನು ನಾನು ಹೇಳಿದ ಪ್ರಕಾರ ಪೊಲೀಸರು ಬರೆದಿದ್ದಾರೆ. ಪೊಲೀಸರು ನಿಪಿ-1 ನ್ನು ಕೈಯಿಂದ ಬರೆದಿದ್ದಾರೋ ಅಥವಾ ಟೈಪ ಮಾಡಿದ್ದಾರೋ ಅಂತಾ ನನಗೆ ಗೊತ್ತಿಲ್ಲ. ನಿಪಿ-1 ನ್ನು ಕೊಡುವಾಗ ಚಾಸಾ-4, 5, 8 ಮತ್ತು 9 ರವರು ನನ್ನ ಜೊತೆ ಇದ್ದರು. ನಿಪಿ-1 ನ್ನು ಹೊರತು ಪಡಿಸಿ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

1 ನೇ ಆರೋಪಿ ನಿವೃತ್ತನಾಗಿ ಬಂದ ಮೇಲೆ ನನ್ನ ಹೆಸರಿನಿಂದ ರೂ.2 ಲಕ್ಷ ಗಳನ್ನು ಎಸ್.ಬಿ.ಐ.ಗೋಕಾಕ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದನು ಎಂದರೆ ಸರಿ. ಸದರಿ ಠೇವಣಿ ರಶೀದಿ 1 ನೇ ಆರೋಪಿತನ ಹತ್ತಿರ ಇದೆ ಎಂದರೆ ಸರಿ. ನಾನು ಬಾಳುವೆ ಮಾಡಲು  ಹೋಗದೆ ಇದ್ದ ಕಾರಣ 1 ನೇ ಆರೋಪಿತನು ನನ್ನ ಮೇಲೆ ವಿವಾಹ ವಿಚ್ಛೇದನ ಪ್ರಕರಣ ದಾಖಲಿಸಿದ್ದಾನೆ ಎಂದರೆ ಸಾಕ್ಷಿಯು "ನಾನು ಬಾಳುವೆ ಮಾಡಲು ಹೋಗಲು ತಯಾರು ಇದ್ದೇನೆ, ಆದರೆ 1 ನೇ ಆರೋಪಿ ನನ್ನನ್ನು ಕರೆದುಕೊಂಡು ಹೋಗಿಲ್ಲ" ಎಂದು ಹೇಳುತ್ತಾರೆ.1 ನೇ ಆರೋಪಿತನ ಎ.ಟಿ.ಎಂ.ಕಾರ್ಡ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ನಿಪಿ-1 ನ್ನು ನೀಡುವ 1 ದಿನ ಮುಂಚೆ 1 ನೇ ಆರೋಪಿತನ ಖಾತೆಯಿಂದ ಶಹಪುರ  ಎ.ಟಿ.ಎಂ. ದಲ್ಲಿ ರೂ.6,000/-ಗಳನ್ನು ತೆಗೆದುಕೊಂಡು ಬಂದು ನಂತರ ಪಿರ್ಯಾದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಎಂ.ಸಿ.ಪ್ರಕರಣ ನಡೆದಾಗ ಬ್ಯಾಂಕನವರಿಗೆ ನನ್ನ ಠೇವಣಿ ರಶೀದಿ ಕಳೆದಿದೆ ಅಂತಾ ಸುಳ್ಳು ಪ್ರಮಾಣ ಪತ್ರ ಮಾಡಿ  ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ 1 ನೇ ಆರೋಪಿತನು ನನ್ನ ಮೇಲೆ ಕ್ರಮ ಕೈಗೊಳ್ಳುವಂತೆ ಎಂ.ಸಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು ಬರೆದ ನಂತರ ನಾನು ಓದಿಲ್ಲ.

ಆರೋಪಿತರು ನನಗೆ ಹೊಡೆ ಬಡೆ ಮಾಡಿ ಮನೆಯಿಂದ ಹೊರಗೆ ಹಾಕಿದ ದಿನ ನನಗೆ ಪೆಟ್ಟಾಗಿತ್ತು, ಕೈ ಬಳೆಗಳು ಒಡೆದಿದ್ದವು, ರಕ್ತ ಬರುತ್ತಿತ್ತು. ನಾನು ಆಸ್ಪತ್ರೆಗೆ ತೋರಿಸಲಿಲ್ಲ, ನೇರವಾಗಿ ತವರು ಮನೆಗೆ ಹೋದೆನು. ನನಗೆ ಪೆಟ್ಟಾಗಿ ರಕ್ತ ಬಂದ ವಿಷಯವನ್ನು ಪೊಲೀಸರಿಗೆ ಹೇಳಿದ್ದೇನೆ. ಪಿರ್ಯಾದಿ ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದ ದಿನಾಂಕ ಗೊತ್ತಿಲ್ಲ. ಆಗ ನಾನು ಒಬ್ಬಳೆ ಇದ್ದೆನು. ಪೊಲೀಸರು ಅಲ್ಲಿ ಬರೆದುಕೊಂಡರು, ಏನು

ಬರೆದುಕೊಂಡರು ಅಂತಾ ನನಗೆ ಗೊತ್ತಿಲ್ಲ. ಅಲ್ಲಿ ನನ್ನ ಸಹಿ ಪಡೆದಿಲ್ಲ. ಅಲ್ಲಿ ಯಾವುದೇ ನಕಾಶೆ ತೆಗೆದಿಲ್ಲ. 3 ನೇ ಆರೋಪಿತಳಿಗೆ ಶುಗರ್ ಮತ್ತು ಬಿ.ಪಿ ಕಾಯಿಲೆ ಇದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಕರ್ತವ್ಯದ ಮೇಲೆ ಇದ್ದಾಗ ಆತನ ಕಾಲು ಮುರಿದಿದೆ ಎಂದರೆ ಸರಿ. ಮಿಲಿಟರಿ ಅಧಿಕಾರಿಗಳು 1 ನೇ ಆರೋಪಿನಿಗೆ ಕಡ್ಡಾಯ ನಿವೃತ್ತಿ ನೀಡಿದ್ದಾರೆ ಎಂದರೆ ಸರಿ. 1 ನೇ ಆರೋಪಿ ಬಡಿಗೆ ಹಿಡಿದುಕೊಂಡು ತಿರುಗಾಡುತ್ತಾನೆ ಎಂದರೆ ಸರಿ. 1 ನೇ ಆರೋಪಿ ದಿನ ನಿತ್ಯದ ಕಾರ್ಯಗಳನ್ನು ಮಾಡಬೇಕು ಎಂದರೆ ಒಬ್ಬರ ಸಹಾಯ ಬೇಕು ಎಂದರೆ ಸರಿ. 1 ನೇ ಆರೋಪಿತನಿಗೆ ನಾನು ನೋಡಿಕೊಳ್ಳಬೇಕಾಗುತ್ತದೆ ಅನ್ನುವ ಕಾರಣ ನಾನು 1 ನೇ ಆರೋಪಿತನನ್ನು ಬಿಟ್ಟು ತವರು ಮನೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಖನಗಾಂವದಿಂದ ಗೋಕಾಕಕ್ಕೆ 20 ನಿಮಿಷದ ದಾರಿ ಎಂದರೆ ಸರಿ. ನನ್ನ ಹತ್ತಿರ ಮೊಬೈಲ ಇಲ್ಲ. ನಾನು ತವರು ಮನೆಗೆ ಹೋಗುವಾಗ ಯಾವುದೆ ಸಾಮಾನುಗಳನ್ನು ತೆಗೆದುಕೊಂಡು ಹೋಗಿಲ್ಲ. ಆರೋಪಿತರು ನನಗೆ ಯಾವತ್ತೂ ತೊಂದರೆ ಕೊಡದೇ ಇದ್ದರೂ ಸಹಿತ, 1 ನೇ ಆರೋಪಿ ನನ್ನ ಮೇಲೆ ಎಂ.ಸಿ ಪ್ರಕರಣ ಮಾಡಿರುವ ಕಾರಣ ಈ ಸುಳ್ಳ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಚೆನ್ನಾಗಿ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.
ಸಹಿ/-
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.